**ದಿನಾಂಕಃ 24.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರ ಶ್ರೀ. ಪಿ ಕೆ ವಿ ವಕೀಲರಿಂದಃ-**

1. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಇನ್ನುಳಿದ ಪ್ರತಿವಾದಿಗಳ ಪರವಾಗಿಯೂ ಸಹ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ತಿಳಿಸಿದ್ದೇನೆ ಎಂದರೆ ಸರಿ. ತಮ್ಮ ವಕೀಲರಿಗೆ ಪ್ರತಿವಾದ ಪತ್ರ ತಯಾರು ಮಾಡಲು ತಾವೇ ಮಾಹಿತಿ ನೀಡಿದ್ದೀರಾ ಎಂದರೆ ಸಾಕ್ಷಿ ನಾನು ನೀಡಿಲ್ಲ ಎನ್ನುತ್ತಾರೆ. ಪ್ರತಿವಾದ ಪತ್ರದಲ್ಲಿ ಮಾಡಿರುವ ಸಹಿ ನನ್ನದೇ ಎಂದರೆ ಸರಿ. ನನ್ನ ಪ್ರತಿವಾದ ಪತ್ರ ಪ್ಯಾರಾ ನಂ.1ರಲ್ಲಿ ದಾವಾ ಸ್ವತ್ತು ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಮಳೂರು ಪಟ್ಟಣಕ್ಕೆ ಸೇರಿದ ಖಾನೇಷುಮಾರಿ ನಂ.315ರಲ್ಲಿ ಪೂರ್ವ-ಪಶ್ಚಿಮ 21 ಅಡಿ, ದಕ್ಷಿಣೋತ್ತರ 50 ಅಡಿಗಳ ಸ್ವತ್ತಾಗಿರುತ್ತದೆ ಎಂದು ಹೇಳಿರುವ ಅಂಶ ಸತ್ಯವಾಗಿರುತ್ತದೆ ಎಂದರೆ ಸರಿ. ಪ್ರತಿವಾದ ಪತ್ರ ಪ್ಯಾರಾ 2 ರಲ್ಲಿ ವಾದಿಗಳು ಮತ್ತು ಪ್ರತಿವಾದಿಗಳು ಹಿಂದೂ ಕುಟುಂಬದ ಸದಸ್ಯರಾಗಿದ್ದು ಮೂಲಕರ್ತ ನಿಂಗೇಗೌಡ ಉರುಫ್ ಮುದ್ದೇಗೌಡರವರು 1ನೇ ಪ್ರತಿವಾದಿಗೆ ಪತಿಯಾಗಿರುತ್ತಾರೆ ಉಳಿದ ಪ್ರತಿವಾದಿಗಳಿಗೆ ತಂದೆ ಆಗಿರುತ್ತಾರೆ ಎಂಬ ಸಂಗತಿ ಸತ್ಯ ಭಾಗಶಃ ಸತ್ಯವಾಗಿದೆ ಎಂದು ಬರೆದಿದೆ ಎಂದರೆ ಸರಿ.

2. ಪ್ರತಿವಾದ ಪತ್ರ ಪ್ಯಾರಾ ನಂ.3 ಮಳೂರು ಪಟ್ಟಣಕ್ಕೆ ಸೇರಿದ ಖಾನೇಷುಮಾರಿ ನಂ.315ರಲ್ಲಿ ಪೂರ್ವ-ಪಶ್ಚಿಮ 21 ಅಡಿ, ದಕ್ಷಿಣೋತ್ತರ 50 ಅಡಿಗಳ ಸ್ವತ್ತು ಇರುತ್ತದೆ ಮೂಲಕರ್ತ ನಿಂಗೇಗೌಡ ಉರುಫ್ ಮುನಿಸಿದ್ದೇಗೌಡರವರು ದಿನಾಂಕ 03.02.2012ರಂದು ಮರಣ ಹೊಂದಿರುತ್ತಾರೆ ಎಂಬುದು ಸತ್ಯವಾಗಿದೆ ಎಂದು ಬರೆದಿದೆ ಎಂದರೆ ಸರಿ.

3. ನಮ್ಮ ತಾಯಿ ಮರಿಯಮ್ಮ ಸುಮಾರು 40 ವರ್ಷಗಳ ಹಿಂದೆಯೇ ಮರಣ ಹೊಂದಿದ್ದಾರೆ ಎಂದರೆ ಸರಿ. ನನ್ನ ತಾಯಿ ತೀರಿಕೊಂಡ ನಂತರ ನನ್ನ ತಂದೆ ನಿಂಗೇಗೌಡ ಚಿಕ್ಕೋಳಮ್ಮ ಎಂಬುವವರನ್ನು ಎರಡನೇ ಮದುವೆ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಎರಡನೇ ಹೆಂಡತಿ ಚಿಕ್ಕೋಳಮ್ಮರವರಿಗೆ ವಾದಿ 2 ಮತ್ತು 3 ಮಕ್ಕಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ವಂಶವೃಕ್ಷದಲ್ಲಿ ವಾದಿ 1 ರಿಂದ 3 ರವರುಗಳ ಹೆಸರಿದ್ದು ಸದರಿ ವಂಶವೃಕ್ಷವನ್ನು ತಾವು ಪರಿಶೀಲಿಸಿ ಪ್ರಶ್ನಿಸಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ನಿಪಿ-3 ವಂಶವೃಕ್ಷದಲ್ಲಿ ನನ್ನ ಹೆಸರು ಇದೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ವಾದಿಯರು ನನ್ನ ತಂದೆಯರ ಎರಡನೇ ಹೆಂಡತಿ ಮತ್ತು ಮಕ್ಕಳಿದ್ದು ಸದರಿಯವರುಗಳು ಕಾನೂನು ಬದ್ಧ ವಾರಸುದಾರರಿದ್ದು ಸದರಿಯವರಿಗೆ ಆಸ್ತಿಯಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ಅವರು ನನಗೆ ಗೊತ್ತಿಲ್ಲ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಸ.ನಂ.256/14, ಖಾತಾ ನಂ.422/422 ಆಗಿ ಬದಲಾವಣೆ ಆಗಿದೆ ಎಂದು ಹೇಳಿದ್ದು ಪೂರಕ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಕ್ಷ್ಯ ಪ್ರಮಾಣಪತ್ರದಲ್ಲಿ ಹೇಳಿರುವ ಆಸ್ತಿ ಮತ್ತು ದಾವಾ ಪತ್ರ ತಿದ್ದುಪಡಿಗಾಗಿ ತಾವು ಸಲ್ಲಿಸಿದ ಅರ್ಜಿಯಲ್ಲಿ ಇರುವ ಆಸ್ತಿ ಬೇರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ವಾದಿಯರಿಗೆ ದಾವಾ ಆಸ್ತಿಯಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ